# ಮಕ್ಕಳ ಸಾಹಿತ್ಯ ಒಂದು ಅಧ್ಯಯನ

## ಮೈನರ್ ರಿಸರ್ಚ್ ಪ್ರೊಜಕ್ಟ್ (ಯು.ಜಿ.ಸಿ)

ಬರೆದವರು,

ಪ್ರೊಸರ್ ಭಾರತಿ ದೇವಿ,
ಸಹಪ್ರಾಧ್ಯಪಕರು ಕನ್ನಡ ವಿಭಾಗ.
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.575001

ಮಕ್ಕಳ ಸಾಹಿತ್ಯ ಒಂದು ಅಧ್ಯಯನ ಪ್ರಬಂಧದ ಉದ್ದೇಶವೇ ಮಕ್ಕಳಿಗಾಗಿ ರಚನೆಯಾದ ಕವಿತೆ, ಕತೆ, ನಾಟಕ ಇವುಗಳನ್ನು ಸಂಗ್ರಹಿಸುವುದಾಗಿದೆ.

ಹೊಸ ಶಿಕ್ಷಣ ಪದ್ಧತಿ ಮತ್ತು ಹೊಸ ವಿಚಾರ ಸರಣಿಯಿಂದ ನವೀನ ವಿಚಾರಗಳು ದೊರೆಯುವಂತಾಯಿತು ಶಿಕ್ಷಣವು ಹೆಚ್ಚು ವ್ಯಾಪಕವಾದಂತೆಲ್ಲಾ ಪ್ರಜ್ಞಾಪುರಕವಾಗಿ ಕಲಿಯುವ ಶಿಕ್ಷಣ ಅಸ್ತಿತ್ವಕ್ಕೆ ಬಂತು. ಅನೇಕ ಕನ್ನಡ ಶಾಲೆಗಳು ಹುಟ್ಟಿಕೊಂಡವು 1913ರಲ್ಲಿ ಪ್ರಾಥಮಿಕ ಶಿಕ್ಷಣವು ಚಿಕ್ಕದೊಂದು ಹಂತವನ್ನು ತಲುಪಿತ್ತು ಹಿರಿಯ ಸಾಹಿತಿಗಳು ಮಕ್ಕಳ ಮನಸ್ಸಿನಲ್ಲಿ ಮೂಡುವ ಭಾವ ಭಾವನೆಗಳನ್ನು ಕನಸಿನ ಲೋಕವನ್ನೂ ಆನಂದಾತಿರೇಕಗಳನ್ನು ವ್ಯಕ್ತಪಡಿಸಲು ಮುಂದಾದರು ಇದರ ಫಲವೇ ಮಕ್ಕಳ ಸಾಹಿತ್ಯ ರಚನೆ ಎನ್ನಬಹುದು. ಶಿಶು ಸಹಜ ಹೃದಯದಿಂದ ಮಕ್ಕಳಿಗಾಗಿ ವಿವಿಧ ವಸ್ತುಗಳನ್ನಾಯ್ದು ಮಕ್ಕಳ ಲೋಕದ ಸುತ್ತ ವಿಹರಿಸಿದರು.

ಅಧ್ಯಯನ ಅವಧಿಯಲ್ಲಿ ಮಕ್ಕಳ ಸಾಹಿತ್ಯದ ಕಡೆಗೆ ಗಮನ ಹರಿಸಲು ಇಂತಹ ಗೀತೆ, ಕತೆ,ನಾಟಕ ಬರೆದವರು ಬಹಳ ಮಟ್ಟಿಗೆ ಉಪಾಧ್ಯಾಯ ವರ್ಗದವರೆನ್ನುವ ಅಭಿಪ್ರಾಯವು ವ್ಯಕ್ತವಾಯಿತು. ಈ ದಿಸೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ಪ್ರವರ್ತಕರು ಕೊಟ್ಟ ಚಳುವಳಿ ಎಷ್ಟೆಂದು ಸಮೀಕ್ಷ ನಡೆಸಿ ಕಾಲವಶರಾಗಿ ಮರೆತು ಹೋದ ಕವಿಗಳನ್ನು ಸಾಧ್ಯವಿದ್ದಷ್ಟ ಹುಡುಕಿ ತೆಗೆದು ಅವರ ಕೊಡುಗೆಯನ್ನು ತಿಳಿಸುವುದಾಗಿದೆ. ಪ್ರಾಥಮಿಕ ಶಾಲೆಗಳಲ್ಲದ್ದ ಹಳೆಯ ಪಠ್ಯ ಪುಸ್ತಕಗಳ ಸಂಗ್ರಹದಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮಕ್ಕಳ ಸಾಹಿತ್ಯ ಬರೆದವರವರಿಗೆ ದೊರೆತ ಪ್ರೇರಣೆ ಹಾಗೂ ಆ ಕಾಲದ ಜನರ ಮನೋಧರ್ಮವನ್ನು ವಿಶ್ಲೇಷಿಸಲಾಗಿದೆ. ಮಕ್ಕಳ ಗೀತೆಗಳ ಮೂಲಕ ಅವರನ್ನು ಹೊಸ ಶಿಕ್ಷಣ ನೀತಿಗೆ ಸೆಳೆದ ಕವಿಗಳನ್ನು ಅವರ ಗೀತೆಗಳನ್ನು ಪ್ರಾತಿ ನಿಧಿಕವಾಗಿ ಗಮನಿಸಲಾಗಿದೆ. ಮಕ್ಕಳ ಸಾಹಿತ್ಯದ ಸ್ವರೂಪ ಲಕ್ಷಣಗಳನ್ನು ದೊರೆತ ಆಕರ ಗ್ರಂಥಗಳಿಗನುಸಾರವಾಗಿ ಅಧ್ಯಯನ ಮಾಡಿ, ಅವುಗಳ ಸಂಕಲನಗಳನ್ನು ಪರಿಶೋಧಿಸಿ ವಿದ್ವಾಂಸರ ಸಂದರ್ಶನದಿಂದ ದೊರೆತ ಮಾಹಿತಿಯ ಆಧಾರದ ಮೇರೆಗೆ ಅಧ್ಯಯನ ಮಾಡಲಾಗಿದೆ.

ಮಕ್ಕಳ ಸಾಹಿತ್ಯವು ರಚನೆಯಾಗಬೇಕಾದರೆ ಅವರಿಗೆ ದೊರೊತ ಪ್ರೇರಣೆ ಪ್ರಭಾವವನ್ನು ನಿರೂಪಿಸಲಾಗಿದೆ. ಇಂಗ್ಲೀಷ್ ವಿದ್ಯಾಭ್ಯಾಸ ಶಿಕ್ಷಣ ರೀತಿ, ಶಿಕ್ಷಣವು ಕಡ್ಡಾಯವಾದಾಗ ಮಕ್ಕಳು ಶಾಲೆಯ ಕಡೆಗೆ ಆಕರ್ಷಿಸಲು ರಚನೆಯಾದ ಗೀತೆ, ಕತೆಗಳನ್ನು ಪ್ರಸಾಪಿಸಲಾಗಿದೆ.

ಅಧ್ಯಾಯ –3ರಲ್ಲಿ ಪ್ರಪಂಚದ ವಿವಿಧ ಕಡೆಗಳಲ್ಲಿ ಮಕ್ಕಳ ಸಾಹಿತ್ಯ ಕಡಗಿದ್ದ ಒಲವನ್ನು ದೊರೆರ ಮಾಹಿತಿಗಳಿಗನುಸಾರವಾಗಿ ವಿಸ್ತರಿಸಲಾಗಿದೆ. ಕವಿತೆ ಹಾಗೂ ನಾಟಕಗಳಿಗಿಂತ ಕಥನ ಸಾಹಿತ್ಯವೇ ಹೆಚ್ಚು ಜನಪ್ರಿಯವಾಗಿರುವುದು ಗಮನಾರ್ಹವಾಗಿದೆ.

ಅಧ್ಯಾಯ– 4ರಲ್ಲಿ ಸಂವಾದಿಯಾಗಿ ಕರ್ನಾಟಕದ ಇತರೆಡೆ ಮಕ್ಕಳ ಸಾಹಿತ್ಯವನ್ನು ರಚಿಸಿ ಅದರ ಕಡೆಗೆ ತಮ್ಮ ಒಲವನ್ನು ತೋರಿದವರ ಕುರಿತು ಇರುವ ಮಿತಿಯಲ್ಲಿಯೇ ಹೇಳಲಾಗಿದೆ. ಮಕ್ಕಳಿಗೆ ತಕ್ಕುದಾದ ಚಿಕ್ಕ ಪದ್ಯಗಳನ್ನು ಮಕ್ಕಳ ಮನೋಧರ್ಮಕ್ಕೆ ತಕ್ಕಂತೆ ಆಯ್ದುಕೊಳ್ಳಲಾಗಿದೆ.

ಅಧ್ಯಾಯ– 5ರಲ್ಲಿ ಶಿಶು ಗೀತೆಗಳನ್ನು ಪ್ರತ್ಯೇಕವಾಗಿ ಹೇಳಲಾಗಿದೆ. ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ದಕ್ಷಿಣ ಕನ್ನಡದಲ್ಲಿ ರಚನೆಯಾದ ಗೀತೆಗಳನ್ನು ಆರಿಸಿಕೊಳ್ಳಲಾಗಿದೆ.

ಅಧ್ಯಾಯ – 7ರಲ್ಲಿ ಮಕ್ಕಳ ಕತೆಗಳ ನಾಟಕಗಳನ್ನು ಇರುವ ಮಿತಿಯಲ್ಲಿಯೇ ಸಂಕ್ಷಿಪ್ತವಾಗಿ ದೊರೆತ ಮಾಹಿತಿಗಳಿಂದ ಹೇಳಲಾಗಿದೆ.